
## ಕಥೋಪದೇಶ

# ಅಹಂಕಾರವನ್ನು ಅಳೆಯುವ ತಕ್ಕಡಿ

ಒಂದು ಊರಿನಲ್ಲಿ ಒಬ್ಬ ಸಾಧು ಇದ್ದ. ಅವನು ಬಹಳ ಪ್ರಸಿದ್ಧನಾಗಿದ್ದ. ತನ್ನ ಶಿಷ್ಯರನ್ನು ಪರೀಕ್ಷೆ ಮಾಡಿ ಆಯ್ಕೆ ಮಾಡಿಕೊಳ್ಳುತ್ತಿದ್ದ. ಒಬ್ಬ ಧನಿಕ ಸಾಧುವಿನ ಹತ್ತಿರ ಬಂದ. "ವ್ಯಾಪಾರ ವ್ಯವಹಾರಗಳನ್ನು ಬಿಟ್ಟುಬಂದಿದ್ದೇನೆ. ನನ್ನನ್ನು ಶಿಷ್ಯನನ್ನಾಗಿ ಮಾಡಿಕೊಳ್ಳಿ" ಎಂದು ಕೇಳಿಕೊಂಡ. ಆಗ ಆ ಸಾಧು ಒಂದು ತಕ್ಕಡಿ ತರಿಸಿದ. "ನಿನ್ನ ಅಹಂಕಾರವೆಷ್ಟಿದೆ ಎಂದು ನೋಡುತ್ತೇನೆ" ಎಂದ. ಅಹಂಕಾರವನ್ನು ಅಳೆಯುವ ಆ ತಕ್ಕಡಿ ೭೦ ಕೆ.ಜಿ. ತೋರಿಸಿತು. ಆ ಶ್ರೀಮಂತ ಹಿಂತಿರುಗಿದ. ಧರ್ಮಗ್ರಂಥಗಳನ್ನೂ, ಶಾಸ್ತ್ರಗಳನ್ನೂ ಓದಿ ಮತ್ತೆ ಬಂದ. ಆಗ, ಅವನ ಅಹಂಕಾರ ೮೦ ಕೆ.ಜಿ.ಗೆ ಏರಿತ್ತು! ಬೇಸರಗೊಂಡ ಧನಿಕ ಇದ್ದುದೆಲ್ಲವನ್ನೂ ದಾನ ಮಾಡಿ ಮರಳಿ ಬಂದ. ಆಗ ಅವನ ಅಹಂಕಾರವನ್ನು ತೋರಿಸುವ ತಕ್ಕಡಿ ೯೦ ಕೆ.ಜಿ. ತೋರಿಸಿತು! "ತಕ್ಕಡಿ ಸರಿಯಾಗಿ ತೋರಿಸುತ್ತಿಲ್ಲ." ಎಂದು ದೂರಿದ ಧನಿಕ.



ಕತೆ ಮತ್ತು ಚಿತ್ರ : ಪಿ. ಪುರುಷೋತ್ತಮ ಕಾರಂತ

ಆಗ ಆ ಸಾಧು ಅವನಿಗೆ ಹೇಳಿದ, "ಎಲ್ಲವನ್ನೂ ಬಿಟ್ಟೆನೆಂದು ಅಭಿಮಾನದಿಂದ ಬಂದೆಯಲ್ಲ, ಆಗ ನಿನ್ನ ಅಹಂಕಾರ ಶೇಕಡ ೭೦ ರಷ್ಟಿತ್ತು. ಶಾಸ್ತ್ರಗಳನ್ನು ಓದಿ ಬಂದ ಮೇಲೆ ಅದು ಇನ್ನೂ ಹೆಚ್ಚಾಯಿತು. ಎಲ್ಲವನ್ನೂ ಬಿಟ್ಟಾಗ, ಇನ್ನೂ ಅಭಿಮಾನ ಹೆಚ್ಚಾಗಿ ಶೇಕಡ ೯೦ ರಷ್ಟಾಯಿತು. ನೀನು ಎಲ್ಲವನ್ನೂ ತ್ಯಜಿಸಿದೆ. ಆದರೆ 'ತ್ಯಜಿಸಿದೆ' ಎಂಬ 'ಅಹಂಕಾರ' ವನ್ನು ಮಾತ್ರ ಬಿಡಲಿಲ್ಲ. ಉಳಿದೆಲ್ಲವನ್ನೂ ಬಿಟ್ಟೆ." ಆ ಧನಿಕ ತನ್ನ ತಪ್ಪನ್ನು ಅರಿತು ನಾಚಿದ. ಅಭಿಮಾನವನ್ನು ಬಿಟ್ಟು ನಿಜವಾದ ಶಿಷ್ಯನಾದ. ★

# ಭಾರತದ ಆಧ್ಯಾತ್ಮಿಕ ಪರಂಪರೆ ~ ಕಪಿಲ



ಕಪಿಲ ಮುನಿ ಸಾಂಖ್ಯ ತತ್ತ್ವಶಾಸ್ತ್ರದ ಪ್ರವರ್ತಕ. ಅವನು ಸುಮಾರು ಕ್ರಿ.ಪೂ. ೩೦೦೦ ರಲ್ಲಿ ಇದ್ದನೆಂದು ನಂಬಲಾಗಿದೆ. ಭಾಗವತದಲ್ಲಿ 'ಕಪಿಲ' ಎಂಬ ಭಗವಂತನ ಅವತಾರದ ಕತೆ ಬರುತ್ತದೆ. ಇವನ ತಾಯಿ ದೇವಹೂತಿ. ತಂದೆ ಕರ್ದಮ. ಇವನು ತನ್ನ ತಾಯಿಗೆ ಬ್ರಹ್ಮವಿದ್ಯೆಯನ್ನು ಉಪದೇಶ ಮಾಡುತ್ತಾನೆ.

ಸಾಂಖ್ಯ ತತ್ತ್ವವು ಪ್ರಕೃತಿ ಮತ್ತು ಪುರುಷಗಳೆಂಬ ಎರಡು ತತ್ತ್ವಗಳ ಬಗ್ಗೆ ಹೇಳುತ್ತದೆ. ಪ್ರಕೃತಿ ಜಡ. ಪುರುಷ ಚೈತನ್ಯಸ್ವರೂಪ. ಪ್ರಕೃತಿಯು ಸತ್ವ, ರಜಸ್ಸು ಮತ್ತು ತಮಸ್ಸು ಎಂಬ ಗುಣಗಳಿಂದ ಮಾಡಲ್ಪಟ್ಟಿದೆ.

ಮಾನವನ ದುಃಖಕ್ಕೆ ಕಾರಣ ಪುರುಷ ಮತ್ತು ಪ್ರಕೃತಿಯರ ನಡುವಣ ಬಾಂಧವ್ಯ. ಅದು ನಿವಾರಣೆಯಾದಾಗ, ಪುರುಷನು ತನ್ನ ನಿಜಸ್ವರೂಪದಲ್ಲಿ ನೆಲೆ ನಿಲ್ಲುತ್ತಾನೆ, ಮುಕ್ತಿಯನ್ನು ಪಡೆಯುತ್ತಾನೆ. ಇದನ್ನೇ ಕೈವಲ್ಯ ಸ್ಥಿತಿಯೆನ್ನುವುದು. ಇದಿಷ್ಟು ಸಾಂಖ್ಯತತ್ತ್ವಶಾಸ್ತ್ರದ ತಿರುಳು. ★